# ಶ್ರೀಮಾತೆಯವರ ಬೆಂಗಳೂರು ಭೇಟಿ

**ಡಾ. ಕೆ. ಎಲ್.ಪ್ರಸನ್ನಾಕ್ಷೀ**

ಶ್ರೀಮಾತೆ ಶಾರದಾದೇವಿಯವರು ಬೆಂಗಳೂರಿಗೆ ನೀಡಿದ ಭೇಟಿಯಿಂದಾಗಿ ಕರ್ನಾಟಕದಲ್ಲಿ ರಾಮಕೃಷ್ಣ ಭಾವಧಾರೆಗೆ ಹೊಸ ಶಕ್ತಿ ಸಂಚಾರವುಂಟಾಯಿತು. ಈ ಚಾರಿತ್ರಿಕ ಘಟನೆಯ ಬಗ್ಗೆ ಬರೆದಿರುವ ಲೇಖಕಿ, ಮೈಸೂರು ಮಹಾರಾಣಿ ಕಾಲೇಜಿನ ನಿವೃತ್ತ ಪ್ರಾಂಶುಪಾಲರು. ಸಂಸ್ಕೃತ ಭಾಷೆ ಹಾಗೂ ಸಾಹಿತ್ಯ, ವೇದಾಂತ ಹಾಗೂ ಇನ್ನಿತರ ಆಧ್ಯಾತ್ಮಿಕ ಕೃತಿಗಳನ್ನು ವಿಶೇಷವಾಗಿ ಅಧ್ಯಯನ ಮಾಡಿರುವ ಅವರು ಮೈಸೂರು ಆಶ್ರಮದ ಭಕ್ತರು. ದೀರ್ಘಕಾಲದಿಂದ ಅವರು 'ವಿವೇಕಪ್ರಭ' ಪತ್ರಿಕೆಯಲ್ಲಿ ಹಲವು ಲೇಖನಗಳನ್ನು ಬರೆಯುತ್ತ ಬಂದಿದ್ದಾರೆ.

### ಪೀಠಿಕೆ

'ಜಗತ್ತನ್ನೇ ದಾಟಿಸಬಲ್ಲ ತಾಯಿ, ಈ ಸಂಸಾರದಲ್ಲಿ ಕಷ್ಟ-ಕೋಟಲೆ, ರೋಗ-ರುಜಿನ, ಮಾನಾಪಮಾನ, ಲಾಭ-ನಷ್ಟಾದಿ ಹೊಡೆತಗಳಿಂದ ನಲುಗುತ್ತಿರುವ ನಮ್ಮನ್ನು ಸಲಹಮ್ಮ' ಎಂದು ಹೃದಯಪೂರ್ವಕವಾಗಿ ಆರ್ದ್ರತೆಯಿಂದ ಪ್ರಾರ್ಥಿಸುವ ಪ್ರತಿ ಜೀವಿಯ ಉದ್ಧಾರ ತನ್ನದು ಎಂಬ ವ್ರತ ಪರಮೇಶ್ವರಿಯದು. ತಾನು ಸೃಷ್ಟಿಸಿದ ಜಗತ್ತಿನ ಮೇಲೆ, ವಿಶ್ವದ ಜೀವಕೋಟಿಗಳ ಮೇಲೆ ಅಪಾರ ಅನುಕಂಪೆ ಆಕೆಯದು. ಹಾಗೆ ಪ್ರಾರ್ಥಿಸುವವರ ಉದ್ಧಾರಕ್ಕಾಗಿ, ಸಂರಕ್ಷಣೆಗಾಗಿ, ಅವರವರ ಭಾವದಂತೆ ತನ್ನನ್ನು ತಾನು ತೋರಿಸಿಕೊಳ್ಳಬಲ್ಲ ಪರಾತ್ಪರ ಶಕ್ತಿ, ಪರಬ್ರಹ್ಮಸ್ವರೂಪಿಣಿ ಆಕೆ. ಸುಡುವ ಶಕ್ತಿಯನ್ನು ಹೊರತುಪಡಿಸಿ ಅಗ್ನಿಯನ್ನು ಹೇಗೆ ಕಲ್ಪಿಸಿಕೊಳ್ಳಲಾಗದೋ ಹಾಗೆ ಪರಾಶಕ್ತಿ ರಹಿತವಾಗಿ ಪರಬ್ರಹ್ಮನನ್ನು ಕಲ್ಪಿಸಿಕೊಳ್ಳಲಾಗದು. ದೀಪ ಹಾಗೂ ಅದರ ಪ್ರಕಾಶದಂತೆ ಪರಬ್ರಹ್ಮನ ಪ್ರಕಾಶ ಪರಾಶಕ್ತಿ. ಈ ತತ್ತ್ವದ ಚೈತನ್ಯದಿಂದ ಭಾರತದ ಅಣು ಅಣುವೂ ಬೆಳಗುತ್ತಿದೆ.

ಎಲ್ಲ ಕಾಲದಲ್ಲೂ ಎಲ್ಲದರಲ್ಲೂ ಎಲ್ಲೆಲ್ಲೂ ಆ ವಸ್ತು ತುಂಬಿ ತುಳುಕುತ್ತಿದೆ. ಅದರಷ್ಟು 'ಸತ್ಯ'ವಾದದು ಮತ್ತೊಂದಿಲ್ಲ ಎಂಬ ತತ್ತ್ವವನ್ನರಿತು ಅದನ್ನು ಪಡೆದುಕೊಳ್ಳಲಿಕ್ಕಾಗಿ ವಿಶ್ವದ ಎಲ್ಲಾ ಭೋಗ ಭಾಗ್ಯಗಳನ್ನೂ ತ್ಯಾಗ ಮಾಡಿದವರ ನಾಡು 'ಭಾ-ರತ'. ಮಹಾ ಮಹಾಸಾಧಕರು; ಈ ಅನಂತ ಸೌಂದರ್ಯ ಅನಂತ ಮಾಧುರ್ಯ ಅನಂತಗುಣ ಅನಂತ ಶಕ್ತಿಸ್ವರೂಪ ಪರಮಾತ್ಮನ ಪರಮಭಾವವನ್ನು ಅನುಭವಿಸಿ ಆ ಆನಂದಾಮೃತದಲ್ಲಿ ಲೀನರಾಗಿದ್ದಾರೆ. ತಾವುಂಡ ಆ ಅಮೃತಾಸ್ವಾದವನ್ನು ಜಗತ್ತಿಗೇ ಉಣಬಡಿಸಿದ ಮಹನೀಯರು ಎಣಿಕೆಗೆ ನಿಲುಕಲಾರದಷ್ಟು ಸಂಖ್ಯೆಯಲ್ಲಿದ್ದಾರೆ. ಆದುದರಿಂದಲೇ ಭಾರತದಲ್ಲಿ ಜನ್ಮ ತಳೆದ ಜೀವಿಗಳ; ವಿಶೇಷವಾಗಿ ಮಾನವರ ಧನ್ಯತೆಯನ್ನು ದೇವಲೋಕವಾಸಿಗಳೂ ಕೊಂಡಾಡುತ್ತಾರೆ ಎಂದು ಭಾಗವತ ಮಹಾಪುರಾಣ, ವಿಷ್ಣುಪುರಾಣ ಮೊದಲಾದ ಪವಿತ್ರ ಗ್ರಂಥಗಳು ಉಲ್ಲೇಖಿಸುತ್ತವೆ. ಪೂರ್ವಪುಣ್ಯಫಲದಿಂದ ದೊರೆತಿರುವ ಈ ಜನ್ಮ ಮುಗಿದ ನಂತರ ಜನ್ಮತಳೆಯಬೇಕಾಗಿ ಬಂದಲ್ಲಿ ದೇವರು ನಮಗೆ ಭಾರತದಲ್ಲೇ ಜನ್ಮ ಕರುಣಿಸಲಿ ಎಂದು ದೇವತೆಗಳೂ ಪ್ರಾರ್ಥಿಸುತ್ತಾರೆ ಎಂದು ಆ ಗ್ರಂಥಗಳು ತಿಳಿಸುತ್ತವೆ.

### ಅವತಾರದ ಅಗತ್ಯ

ಆದರೆ ಏನು ಕಾರಣವೋ, ಯಾವ ಮೋಹವೋ, ಯಾವ ಮಾಯೆಯೋ - ಮಾನವ ತನ್ನ ಈ ಔನ್ನತ್ಯವನ್ನು, ಸಚ್ಚಿದಾನಂದಾಮೃತ ಮೂಲವನ್ನೂ, ಶ್ರೇಷ್ಠತೆಯನ್ನು ಧನ್ಯತೆಯನ್ನೂ ಪವಿತ್ರತೆಯನ್ನೂ ಮರೆತು ಆಗಾಗ ಈಗಿದ್ದು (ಕ್ಷಣದಲ್ಲಿ) ಮರೆಯಾಗುವ ದುಃಖ ನಾಶಗಳಲ್ಲೆ ಕೊನೆಗೊಳ್ಳುವ ಐಂದ್ರಯಿಕ ಭೋಗಗಳೆಡೆಗೆ ಆಕರ್ಷಿತನಾಗಿ, ಅದೇ ತನ್ನ ಜೀವನದ ಪರಮಗುರಿ ಎಂದು ಭಾವಿಸಿ ಬದುಕತೊಡಗುತ್ತಾನೆ. ಪ್ರತಿದಿನವೂ ಉದಯಿಸಿದ ಸೂರ್ಯ ಅಸ್ತನಾಗುವುದನ್ನೂ, ಮೇಲೇರಿದ ಚಕ್ರದ ಭಾಗ ಕೆಳಗೆ ಬರುವುದನ್ನೂ ಇದೇ ಬಗೆಯ ಇನ್ನೂ ಅನೇಕ ನಿದರ್ಶನಗಳನ್ನು ತನ್ನ ಕಣ್ಣೆದುರೇ ನೋಡುತ್ತಿದ್ದರೂ -



**ಸರ್ವೇ ಕ್ಷಯಾಂತಾ ನಿಚಯಾಃ ಪತನಾಂತಾಃ ಸಮುಚ್ಛ್ರಯಾಃ ।**
**ಸಂಯೋಗಾ ವಿಪ್ರಯೋಗಾಂತಾ ಮರಣಾಂತಂ ಚ ಜೀವಿತಮ್ ॥**

*(ಶ್ರೀಮದ್ವಾಲ್ಮೀಕಿ ರಾಮಾಯಣ, ಉತ್ತರಕಾಂಡ, ಸರ್ಗ ೫೨, ಶ್ಲೋಕ ೧೧)*

'ಎಲ್ಲಾ ಸಂಗ್ರಹ(ಖನಿಜ, ನಿಧಿ)ಗಳೂ ಖಾಲಿಯಾಗಿ ಹೋಗುತ್ತವೆ, ಎಲ್ಲಾ ಅಭಿವೃದ್ಧಿಯೂ ಬೀಳುವಿಕೆಯಲ್ಲಿ ಕೊನೆಗಾಣುತ್ತದೆ.

ಎಲ್ಲಾ ಸಂಬಂಧಗಳೂ ವಿರಹದಲ್ಲಿ (ಬೇರ್ಪಡುವಿಕೆಯಲ್ಲಿ) ಕೊನೆಗೊಳ್ಳುತ್ತವೆ. ಜೀವನ ಮರಣದೊಡನೆ ಅಂತ್ಯವಾಗುತ್ತದೆ.'

ತಂದೆ ತಾಯಿ ಮಕ್ಕಳು ಬಂಧುಬಾಂಧವಾದಿ ಸಂಬಂಧಗಳೂ ಆಸ್ತಿ ಐಶ್ವರ್ಯಾದಿಗಳೂ ಸುಖಭೋಗಗಳೂ ಎಲ್ಲವೂ ಕಳಚಿ ಹೋಗುವುವೇ; ಕ್ಷಣಿಕವೇ, ಸ್ಥಿರವಲ್ಲ – ಎಂದು ಅರಿಯದೆಯೇ ಪಶುವಿನಂತೆ ಮಾನವನು ಜೀವನ ನಡೆಸುತ್ತಾನೆ. ಇಂತಹ ಒಂದು ಸ್ಥಿತಿ ಸಮಾಜದಲ್ಲಿ ಉಂಟಾದಾಗ 'ದೇವರು (ಪರಬ್ರಹ್ಮ) ಒಂದೇ ಸತ್ಯ, ಶಾಶ್ವತ, ಉಳಿದುದೆಲ್ಲಾ ಕ್ಷಣಿಕ ಮಿಥ್ಯಾ' ಎಂಬ ತತ್ತ್ವವನ್ನು ಮಾನವರಿಗೆ ಮನವರಿಕೆ ಮಾಡಿಕೊಡಲು ಪರಮಾತ್ಮನು ವಿಭಿನ್ನ ವಿಶಿಷ್ಟ ರೀತಿಗಳಲ್ಲಿ ಅವತರಿಸುತ್ತಾನೆ. (ಅವ=) ದಾರಿ ತಪ್ಪುತ್ತಿರುವರನ್ನು, ಸದಾಚಾರ ಸನ್ನಿಷ್ಠ ಸನ್ಮಾರ್ಗಕ್ಕೆ ಎಳೆದುತಂದು ಅವರು ಈ 'ಪರಮ–ಸತ್ಯ'ವನ್ನು ಅರಿಯುವಂತೆ ಮಾಡಿ (ತರ=) ಅವರನ್ನು ಉದ್ಧರಿಸುತ್ತಾನೆ, ಕಾಪಾಡುತ್ತಾನೆ, ತಮ್ಮ ಮೂಲನೆಲೆಯನ್ನು ಸೇರಿ ಆನಂದಾಮೃತದಲ್ಲಿ ಲಯವಾಗುವಂತೆ ಮಾಡುತ್ತಾನೆ.

## ಶ್ರೀರಾಮಕೃಷ್ಣಾವತಾರ

ಪಾಶ್ಚಾತ್ಯ ಆಚಾರ–ವಿಚಾರ, ಆಹಾರ–ವಿಹಾರ, ವೇಷ–ಭಾಷೆಗಳೆಡೆಗೆ ಆಕರ್ಷಿತರಾಗಿ ಭಾರತದ ಜನತೆ ಭಾರತೀಯತೆಯ ಔನ್ನತ್ಯ ಮಹಿಮೆಗಳನ್ನು ಆ ಪರಕೀಯ ಸಂಸ್ಕೃತಿಯ ಅನುಕರಣೆಯ ಪರದೆಯ ಅಡಿಯಲ್ಲಿ ತಿರಸ್ಕರಿಸತೊಡಗಿದ್ದಂತಹ, ಸರಿ–ತಪ್ಪುಗಳ ವಿವೇಕದ ಕಣ್ಣನ್ನು ಮುಚ್ಚಿ, ಅಂಧಾನುಸರಣೆಯ ವೇಗಕ್ಕೆ ಸಿಲುಕಿ ಕೊಚ್ಚಿ ಹೋಗುತ್ತಿದ್ದ ಸಂದಿಗ್ಧ ಕಾಲದಲ್ಲಿ ಶ್ರೀರಾಮಕೃಷ್ಣ ಪರಮಹಂಸರು ಅವತರಿಸಿದರು. ಅವರು ಮೊದಲು ತಾವು 'ಪರಮಸತ್ಯ'ದ ಸ್ವರೂಪವನ್ನು ಅನುಭವಿಸಿದರು. ಅದರ ವಿವಿಧ ಭಾಗಗಳಲ್ಲಿ ಅದರೊಡನೆ ಒಂದಾಗಿ ಆನಂದಾಮೃತ ರಸವನ್ನು ಆಸ್ವಾದಿಸಿದರು. ವಿವಿಧ ಮತಗಳು ಬೋಧಿಸುವ ತತ್ತ್ವಗಳು ಬೇರೆ ಬೇರೆಯಲ್ಲ, ಅವೆಲ್ಲಾ ಒಂದೇ 'ಪರಮಸತ್ಯ'ವನ್ನೇ ಬೋಧಿಸುತ್ತಿವೆ. ಮಾರ್ಗ ಭಾಷೆ ಬೋಧನಾವಿಧಾನ ಮಾತ್ರ ಬೇರೆ ಬೇರೆ ಎಂಬುದನ್ನು, ಪ್ರತಿಯೊಂದು ಮತದ ಮಾರ್ಗವನ್ನನುಸರಿಸಿ ಅದು ಬೋಧಿಸುವ ತತ್ತ್ವವನ್ನು ಕಂಡು ದೃಢವಾಗಿ ಸ್ಪಷ್ಟವಾಗಿ ತಿಳಿದುಕೊಂಡರು. ಮಾರ್ಗಗಳು ಬೇರೆ, ಆದರೆ ಸತ್ಯ ಒಂದೇ ಎಂಬ ತತ್ತ್ವವನ್ನು ಆಗಿನ ಜನತೆಗೆ ಅರ್ಥವಾಗುವಂತೆ ಬೋಧಿಸಿದರು. ವೈಚಾರಿಕ ಸ್ಥಿರತೆ ಇಲ್ಲದೆ ಅರೆಬರೆ ತಿಳಿವಳಿಕೆಯಿಂದ '**ಅಂಧೇನೈವ ನೀಯಮಾನಾ ಯಥಾಂಧಾಃ**' *(ಕಠ ಉ., ೨–೫)* ಕುರುಡರನ್ನು ಅನುಸರಿಸುವ ಕುರುಡರಂತೆ ಮೂಢ ಮಾರ್ಗದೆಡೆಗೆ ಧಾವಿಸುತ್ತಿದ್ದ ಜನತೆಯಲ್ಲಿ ವೈಚಾರಿಕ ಜಾಗೃತಿಯನ್ನೂ ಭಾವಸಾಮರಸ್ಯವನ್ನೂ ಮೂಡಿಸಿದರು.

## ಶ್ರೀರಾಮಕೃಷ್ಣರ ಲೀಲಾಸಹಚರಿ

ಶ್ರೀರಾಮಕೃಷ್ಣರು ತಮ್ಮ ಸಹಧರ್ಮಿಣಿ ಶಾರದಾದೇವಿಯವರು ತಮ್ಮ ಈ ಲೋಕೋಜ್ಜೀವನ ಕಾರ್ಯವನ್ನು ಮುಂದುವರಿಸಬೇಕೆಂದು ಆಗ್ರಹಿಸಿದರು. ಶ್ರೀಮಾತೆ ಅವರ ಇಚ್ಛೆಯನ್ನು ಅಕ್ಷರಶಃ ನೆರವೇರಿಸುವ ದೀಕ್ಷೆ ಹೊತ್ತರು. ವಿಶ್ವದ ಪ್ರತಿಯೊಂದು ಜೀವಿಯೂ ಉದ್ಧಾರವಾಗುವವರೆಗೆ ತಾನು ತನ್ನ ಈ ಸಂಕಲ್ಪದಿಂದ ವಿರಮಿಸುವುದಿಲ್ಲ ಎಂದು ಘೋಷಿಸಿದರೂ ಕೂಡ. ಆದ್ದರಿಂದಲೇ ತಮ್ಮ ಎಣೆಯಿಲ್ಲದ, ವಿಶ್ರಾಂತಿಯೇ ಇಲ್ಲದ ಕಾರ್ಯಗಳ ನಡುವೆಯೂ ಅವರು ತಮ್ಮಿಂದ ಮಂತ್ರವನ್ನು ಪಡೆದುಕೊಂಡು ಅದರ ಅನುಷ್ಠಾನ, ಜಪಾದಿಗಳನ್ನು ಮಾಡದೆ ಗುರುದ್ರೋಹ ಪಾಪಕ್ಕೆ ಒಳಗಾಗಬಹುದಾದ ಜೀವಿಗಳಿಗಾಗಿ ತಾವೇ ಅವರ ಪರವಾಗಿ ಜಪವನ್ನು ಮಾಡುತ್ತಿದ್ದರು. *('ಶಾರದಾದೇವಿ ಜೀವನಗಂಗಾ', ಪುಟ ೫೨೮)* ಅಪಾರ ಕರುಣಾಮಯಿ ಶ್ರೀಮಾತೆ ತಮ್ಮನ್ನು ಆಶ್ರಯಿಸಿದವರ ದೋಷಗಳನ್ನೂ ಗುಣವನ್ನಾಗಿ ಪರಿವರ್ತಿಸಿ ಬಿಡಬಲ್ಲ ಮಹಿಮಾನ್ವಿತೆ. ('**ದೋಷಾನಶೇಷಾನ್ ಸಗುಣೀ ಕರೋಷಿ**' – *'ಶ್ರೀಶಾರದಾದೇವಿ ಸ್ತೋತ್ರಂ–ಶ್ಲೋ. ೯').* ಜಾತಿ, ಕುಲ, ಗೋತ್ರ, ವಯಸ್ಸು, ವೃತ್ತಿ, ಸಂಪನ್ನತೆ ಈ ಯಾವುದನ್ನೂ ಪರಿಭಾವಿಸದೆ ಅವರು ಎಲ್ಲರ ಮೇಲೂ ತನ್ನ ಪ್ರೇಮಸಿಂಧುವಿನ ಅಮೃತಸೇಚನ ಮಾಡಿದರು.

ಶ್ರೀರಾಮಕೃಷ್ಣರ ಶರೀರತ್ಯಾಗದ ನಂತರ ಶ್ರೀಮಾತೆಯವರ ವಿಶ್ವಸಂರಕ್ಷಣೆಯ ಜವಾಬ್ದಾರಿ ವಿಸ್ತಾರವಾಯಿತು. ಹಾಗಾಗಿ ತಾಯಿ ತಾನು ಅವತರಿಸಿದ ಭೂಪ್ರದೇಶದ ಜನರನ್ನು ಮಾತ್ರವಲ್ಲದೆ ಸಂಪೂರ್ಣ ಭಾರತ ಭೂಪ್ರದೇಶ ವಾಸಿಗಳನ್ನು ಅನುಗ್ರಹಿಸುವ ಸಂಕಲ್ಪ ಮಾಡಿ, ಅದಕ್ಕೆ 'ತೀರ್ಥಯಾತ್ರೆ'ಯನ್ನು ನೆಪಮಾಡಿಕೊಂಡರು. ದೇವಾಲಯದಲ್ಲಿ ವಿರಾಜಮಾನನಾಗಿರುವ ಪರಮಾತ್ಮ ತನ್ನನ್ನು ದರ್ಶಿಸಲು ಬಾರದ, ಬರಲಾಗದ ಕೌಟುಂಬಿಕ ಸ್ಥಿತಿಯಲ್ಲಿರುವ, ಶರೀರ ಸ್ಥಿತಿಯಲ್ಲಿರುವ, ಜೀವಿಗಳನ್ನು ಉದ್ಧರಿಸಲಿಕ್ಕಾಗಿ ಉತ್ಸವಮೂರ್ತಿಯ ರೂಪವನ್ನು ತಳೆಯುವನು. ಅವನು ರಥಾರೂಢನಾಗಿ ಲೋಕಾನುಗ್ರಹಕ್ಕೆ ಹೊರಟು ಎಲ್ಲಾ ಜೀವಿಗಳನ್ನೂ ಉದ್ಧರಿಸುವನು ಎಂದು ಶಾಸ್ತ್ರಗ್ರಂಥಗಳು ತಿಳಿಸುತ್ತವೆ. ಹಾಗಾಗಿ – **ರಥಸ್ಥಂ ಕೇಶವಂ ದೃಷ್ಟ್ವಾ ಪುನರ್ಜನ್ಮ ನ ವಿದ್ಯತೇ** – ರಥಾರೂಢನಾಗಿ ಲೋಕಾನುಗ್ರಹಕ್ಕೆ ಹೊರಟ ಪರಮಾತ್ಮನ ದರ್ಶನ ಮಾಡಿದವನು ಮತ್ತೆ ಶರೀರ ತಳೆಯುವುದಿಲ್ಲ – ಎಂಬ ಲೋಕೋಕ್ತಿಗಳು ಪ್ರಚಲಿತವಾಗಿವೆ. ಹಾಗೆಯೇ ಶ್ರೀಮಾತೆ ಉತ್ಸವಮೂರ್ತಿಯಾಗಿ ಯಾತನೆಯಲ್ಲಿ ತೊಳಲಾಡುತ್ತಿದ್ದ (=ಯಾ) ಜೀವಿಗಳಿಗೆ ಶಾಂತಿ ಸುಖ ನೆಮ್ಮದಿ ಸಂತೋಷಾದಿಗಳನ್ನು ಕರುಣಿಸಿ (=ತ್ರ) ಅವರನ್ನು ರಕ್ಷಿಸಿದರು, ಉದ್ಧರಿಸಿದರು.

## ಶ್ರೀಮಾತೆಯವರ ದಕ್ಷಿಣಭಾರತ ಯಾತ್ರೆ

ಶ್ರೀಮಾತೆ ವೃಂದಾವನ, ಕಾಶಿ, ಪುರಿ, ಕ್ಷೇತ್ರಯಾತ್ರೆಯಂತೆ ಒಮ್ಮೆ ದಕ್ಷಿಣಭಾರತದ ಕಡೆಗೂ ಯಾತ್ರೆ ಮಾಡಿದರು. ಅಲ್ಲಿ ತಮ್ಮ ದಿವ್ಯ ಸನ್ನಿಧಿಯಿಂದ ರಾಮಲಿಂಗೇಶ್ವರ ಮೊದಲಾದ ಕ್ಷೇತ್ರಗಳ ದೈವಿಕತೆಯನ್ನು ಪುನರುಜ್ಜೀವನಗೊಳಿಸಿದರು. ನಂತರ ಮದರಾಸಿಗೆ (ಈಗಿನ ಚೆನ್ನೈಗೆ) ಅವರು ಬಂದರು. ಆಗ ಅಲ್ಲಿನ ರಾಮಕೃಷ್ಣ ಮಠದ ಅಧ್ಯಕ್ಷರು ಸ್ವಾಮಿ ರಾಮಕೃಷ್ಣಾನಂದರು (ಶಶಿ ಮಹಾರಾಜ್). ಈ ವಿಷಯ ಬೆಂಗಳೂರಿನ ಆಶ್ರಮದ ಭಕ್ತರಿಗೆ ತಿಳಿಯಿತು. ಅವರು ಶ್ರೀಮಾತೆ ತಮ್ಮ ದಕ್ಷಿಣದ ಯಾತ್ರೆಯಲ್ಲಿ ಬೆಂಗಳೂರನ್ನು ಸೇರಿಸಿಕೊಳ್ಳಬೇಕೆಂದು ಪ್ರಾರ್ಥಿಸಲು ನಿಶ್ಚಯಿಸಿದರು. ಅದರಂತೆ ಡಾ. ವೆಂಕಟರಂಗಂ ಎಂಬುವವರು ಸ್ವಾಮಿ ರಾಮಕೃಷ್ಣಾನಂದ ಮಹಾರಾಜರಿಗೆ – ಶ್ರೀಮಾತೆ ಬೆಂಗಳೂರನ್ನು ಸಂದ

ರ್ಶಿಸಿ ಇಲ್ಲಿನ ಭಕ್ತರನ್ನು ಅನುಗ್ರಹಿಸಬೇಕೆಂದು ಪ್ರಾರ್ಥಿಸಿ ಪತ್ರ ಬರೆದರು. ಆದರೆ ಬೇಲೂರು ಮಠದ ಅಧಿಕಾರಿಗಳು ಈ ಪ್ರಾರ್ಥನೆಯನ್ನು ಅಂಗೀಕರಿಸಲಿಲ್ಲ. ಏಕೆಂದರೆ ಆಗ ಬೆಂಗಳೂರಿನಲ್ಲಿ ಪ್ಲೇಗ್ ರೋಗದ ಸೋಂಕು ಇತ್ತು ಎಂಬ ಸುದ್ದಿ ಅವರಿಗೆ ತಿಳಿದಿತ್ತು. ಇಂತಹ ಸಂದರ್ಭದಲ್ಲಿ ಶ್ರೀಮಾತೆ ಬೆಂಗಳೂರಿಗೆ ಹೋಗುವುದು ಸೂಕ್ತವಲ್ಲ ಎಂದು ಅವರ ಬೆಂಗಳೂರು ಪ್ರಯಾಣವನ್ನು ನಿಷೇಧಿಸಿದರು. ಹಾಗಾಗಿ ಆಗ ಬೆಂಗಳೂರು ಆಶ್ರಮದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸ್ವಾಮಿ ವಿಶುದ್ಧಾನಂದರು, ಶ್ರೀ ನಾರಾಯಣ ಐಯಂಗಾರ್ಯರು ಮತ್ತು ಶ್ರೀ ರಾಜಗೋಪಾಲ ನಾಯಿಡು ಅವರು ಮದರಾಸಿಗೆ ಹೋಗಿ ಶ್ರೀಮಾತೆಯ ದರ್ಶನ ಮಾಡಿ ಅವರ ಆಶೀರ್ವಾದವನ್ನು ಪಡೆದುಕೊಂಡರು. ಶ್ರೀಮಾತೆಯವರನ್ನು ಬೆಂಗಳೂರಿಗೆ ಬರುವಂತೆ ಪ್ರಾರ್ಥಿಸಿದರೂ ಅದು ನೆರವೇರಲಿಲ್ಲ. ಅವರೆಲ್ಲರೂ ಬೆಂಗಳೂರಿಗೆ ಹಿಂದಿರುಗಿ ಬಂದು ಶ್ರೀಮಾತೆ ಬೆಂಗಳೂರಿಗೆ ಬರುತ್ತಿಲ್ಲ ಎಂಬ ಸುದ್ದಿಯನ್ನು ತಿಳಿಸಿದರು. ಅಗ ತುಳಸಿ ಮಹಾರಾಜ್ (ಸ್ವಾಮಿ ನಿರ್ಮಲಾನಂದ, ಬೆಂಗಳೂರು ಆಶ್ರಮದ ಅಧ್ಯಕ್ಷರು) ತಕ್ಷಣ ಮದರಾಸಿಗೆ ಧಾವಿಸಿದರು. ಅವರು ಅಲ್ಲಿ ಎರಡು ದಿನ ಇದ್ದು ಶ್ರೀಮಾತೆ ಹಾಗೂ ಶ್ರೀರಾಮಕೃಷ್ಣಾನಂದರೊಡನೆ ಶ್ರೀಮಾತೆ ಬೆಂಗಳೂರಿಗೆ ಆಗಮಿಸಬೇಕಾದ ವಿಷಯವಾಗಿ ಚರ್ಚಿಸಿದರು. ಮತ್ತು ಆಶ್ರಮದ ಸುತ್ತಲಿನ ಪ್ರದೇಶಗಳಲ್ಲೆಲ್ಲೂ ಪ್ಲೇಗ್ ಸೋಂಕಿನ ಸುದ್ದಿಯೇ ಇಲ್ಲ ಎಂಬ ವಾಸ್ತವಿಕ ವಿಷಯವನ್ನು ಮನದಟ್ಟು ಮಾಡಿದರು. ಈಗ ಶ್ರೀ ರಾಮಕೃಷ್ಣ ಮಠ ಇರುವ ದೊಡ್ಡಬಸವನ ದೇವಾಲಯದ ರಸ್ತೆ, ಬಸವನಗುಡಿ ಪ್ರದೇಶವು ನಗರ ವ್ಯಾಪ್ತಿಯಿಂದ ಬಹಳ ದೂರದಲ್ಲಿತ್ತು. ನಗರದ ಗೌಜುಗದ್ದಲದ ಸಂಸ್ಪರ್ಶ ಅಲ್ಲಿರಲಿಲ್ಲ. ಆಶ್ರಮದ ಒಳಗೂ ಹೊರಗೂ ರಾಶಿ ರಾಶಿ ಮರಗಳು ಇದ್ದವು. ಆಗ ವಸಂತಕಾಲ ಬೇರೆ ಆಗಿದ್ದುದರಿಂದ ಗಿಡಮರಗಳೆಲ್ಲಾ ಹೂವು ತುಂಬಿ ಆಶ್ರಮದ ವಾತಾವರಣ ಸಂತಸ ಸಂಭ್ರಮಗಳಿಂದ ಕೂಡಿ ಪ್ರಶಾಂತವಾಗಿತ್ತು, ಹಾಗಾಗಿ ಆ ಜಾಗಕ್ಕೆ ಯಾವ ಸೋಂಕೂ ಸ್ಪರ್ಶಿಸುವಂತಿರಲಿಲ್ಲ. ಅಷ್ಟು ಪರಮಶುದ್ಧ ವಾತಾವರಣ ಅಲ್ಲಿತ್ತು.

### ಬೆಂಗಳೂರಿಗೆ ಕರೆತರುವ ಪ್ರಯತ್ನ

ಇಷ್ಟೇ ಅಲ್ಲದೆ ಆಶ್ರಮದ ಗಿಡಮರಗಳು ಹೂತುಂಬಿ ಶ್ರೀಮಾತೆಯವರನ್ನು ಸ್ವಾಗತಿಸಲು ತವಕಿಸುತ್ತಿರುವಂತೆ; ಆಶ್ರಮದ ಸಾವಿರಾರು ಜನರು ಮನದುಂಬಿ ತಾಯಿಯ ಅನುಗ್ರಹದ ಭಿಕ್ಷೆಗಾಗಿ ಕಾತರಿಸುತ್ತಾ ತೀವ್ರ ಹಂಬಲ ಪರಿತಾಪದಲ್ಲಿದ್ದರು. ಈ ಎಲ್ಲಾ ಅಂಶಗಳನ್ನು ಸ್ವಾಮಿ ರಾಮಕೃಷ್ಣಾನಂದರಿಗೂ, ಶ್ರೀಮಾತೆಯವರಿಗೂ ಮನಮುಟ್ಟುವಂತೆ ಸ್ವಾಮಿ ನಿರ್ಮಲಾನಂದರು ವಿವರಿಸಿದರು. ಶ್ರೀಮಾತೆಯವರ ಪಾದಧೂಳಿಯಿಂದ ಬೆಂಗಳೂರು ನಗರವನ್ನೂ ನಗರದ ಜನತೆಯನ್ನು ಅನುಗ್ರಹಿಸಬೇಕೆಂದೂ ಕರುಣಾಪೂರ್ಣವಾಗಿ ಬೇಡಿಕೊಂಡರು.

ಶ್ರೀಮಾತೆಯವರು 'ಅಮ್ಮಾ!' ಎಂದು ಕೂಗಿ ಬೇಡಿಕೊಂಡವರು ಯಾರು? ಅವರ ಕುಲಗೋತ್ರ ಚಾರಿತ್ರ್ಯ ಯಾವುದನ್ನೂ ಗಮನಿಸದೆ ಅನುಗ್ರಹಿಸುವ ಕರುಣಾಮಯಿ. ಶ್ರೀರಾಮಕೃಷ್ಣರಿಗೆ ಊಟ ಕೊಡುವ ಒಂದೇ ಸಂದರ್ಭ ಶ್ರೀಮಾತೆಗೆ ಅವರ ದರ್ಶನಕ್ಕಿದ್ದ ಅವಕಾಶ. ಯಾರಾದರೂ ತಾನು ಆ ಕೆಲಸವನ್ನು ಮಾಡುವೆನೆಂದು ದೈನ್ಯದಿಂದ ಬೇಡಿಕೊಂಡರೆ ತನ್ನ ಆ ಅವಕಾಶವನ್ನೂ, ಪತಿ ಸೇವಾ ಭಾಗ್ಯವನ್ನೂ ಬಿಟ್ಟುಕೊಡುವ ಔದಾರ್ಯವುಳ್ಳವರು. ಶ್ರೀರಾಮಕೃಷ್ಣರೇ ಹಾಗೆ ಮಾಡಬಾರದೆಂದೂ, ತಾವು ಯಾರು ಯಾರೋ ತಂದ ಆಹಾರವನ್ನು ಸೇವಿಸಲಾರೆನೆಂದೂ ತಿಳಿಸಿದಾಗ ಶ್ರೀಮಾತೆ– 'ಅಮ್ಮಾ ಅಂತ ಕರೆದು ಬೇಡಿಕೊಂಡವರ ಪ್ರಾರ್ಥನೆಗೆ ನಾನು ಇಲ್ಲ ಅನ್ನಲಾರೆ... ನೀವು ಎಲ್ಲರ ಭಗವಾನರು..' ಎಂದು ಹೇಳಿದ ಸಮಾಧಾನಕರ ಉತ್ತರ ಈ ಸಂದರ್ಭದಲ್ಲಿ ನೆನಪಿಗೆ ಬರುತ್ತದೆ *('ಶ್ರೀಶಾರದಾದೇವಿ ಜೀವನಗಂಗಾ', ಪು. ೯೦).* ಅಂತೆಯೇ ಶ್ರೀಮದ್ವಾಲ್ಮೀಕಿ ರಾಮಾಯಣದ ಯುದ್ಧಕಾಂಡದ ೧೧೬ನೇ ಅಧ್ಯಾಯದಲ್ಲಿ ಹನುಮ–ಸೀತೆಯರ ನಡುವೆ ನಡೆದ ಸಂಭಾಷಣೆ ನೆನಪಿಗೆ ಬರುತ್ತದೆ. ಯುದ್ಧದಲ್ಲಿ ಶ್ರೀರಾಮನಿಗೆ ಜಯ ದೊರೆತ ಸುದ್ದಿಯನ್ನು ಸೀತಾಮಾತೆಗೆ ತಿಳಿಸಿದ ಹನುಮ, ತಾಯಿ ಸೀತೆಯನ್ನು ಬಾಧಿಸಿದ ಎಲ್ಲಾ ರಾಕ್ಷಸಿಯರನ್ನೂ ಅವರು ಯಾವ ಯಾವ ರೀತಿ ತೊಂದರೆ ಕೊಟ್ಟಿದ್ದರೂ, ಅದೇ ರೀತಿಯಲ್ಲಿ ಹಿಂಸಿಸಲು ತನಗೆ ಅವಕಾಶ ಕೊಡಬೇಕೆಂದು ಬೇಡುತ್ತಾನೆ. ಆಗ ಅಮ್ಮ ಸೀತೆ –

**ಪಾಪಾನಾಂ ವಾ ಶುಭಾನಾಂ ವಾ ವಧಾರ್ಹಾಣಾಮಥಾಪಿ ವಾ**
**ಕಾರ್ಯಂ ಕರುಣಮಾರ್ಯೇಣ ನ ಕಶ್ಚಿನ್ನಾಪರಾಧ್ಯತಿ ।**
**ಲೋಕಹಿಂಸಾ ವಿಹಾರಾಣಾಂ ಕ್ರೂರಾಣಾಂ ಪಾಪಕರ್ಮಣಾಮ್**
**ಕುರ್ವತಾಮಪಿ ಪಾಪಾನಿ ನೈವ ಕಾರ್ಯಮಶೋಭನಮ್॥**

'ಪಾಪಿಗಳೇ ಆಗಿದ್ದರೂ ವಧೆಗೆ ಅರ್ಹರಾಗಿದ್ದರೂ ಅವರ ಮೇಲೂ ಕರುಣೆ ತೋರಬೇಕು. ತಪ್ಪು ಮಾಡದವರು ಯಾರಿ ದ್ದಾರೆ! ಲೋಕಕ್ಕೆ ಹಿಂಸೆ ಉಂಟುಮಾಡುತ್ತಾ ಕ್ರೂರಿಗಳಾದವರಿಗೂ ನಾವು ಕೇಡು ಬಗೆಯಬಾರದು' – ಎನ್ನುತ್ತಾಳೆ

ಸ್ವಾಮಿ ನಿರ್ಮಲಾನಂದರು ಬೆಂಗಳೂರಿನ ಜನತೆಯ ಮೇಲೆ ಅನುಗ್ರಹ ಮಾಡಬೇಕೆಂದು ಪ್ರಾರ್ಥಿಸಿದ ರೀತಿಯಿಂದ ಕರಗಿ ಹೋದ **'ಕಲಿಯುಗದ ಸೀತೆ'** ಶ್ರೀಮಾತೆ, ಕೇಂದ್ರದ ನಿಷೇಧ, ಅನಾನುಕೂಲ, ಅಸ್ವಾಸ್ಥ್ಯ ಯಾವುದಕ್ಕೂ ಗಮನ ಕೊಡದೆ ಬೆಂಗಳೂರಿಗೆ ಬರುವುದಕ್ಕೆ ತಮ್ಮ ಸಮ್ಮತಿಯನ್ನು ಕೊಟ್ಟುಬಿಟ್ಟರು.

### ಶ್ರೀಮಾತೆಯವರ – ಬೆಂಗಳೂರು ಆಗಮನ !

ಅದರಂತೆ ೨೪.೦೩.೧೯೧೧ರಂದು ಶ್ರೀಮಾತೆ ಶಶಿ ಮಹಾರಾಜ್, ತುಳಸಿ ಮಹಾರಾಜ್ ಹಾಗೂ ತಮ್ಮ ಸಂಗಾತಿಗಳಾದ ಗೋಲಾಪ್ ಮಾ ಮೊದಲಾದವರೊಡನೆ ಬೆಂಗಳೂರಿಗೆ ಬಂದು ತಲುಪಿದರು. ಶ್ರೀಮಾತೆಯವರನ್ನು ಸ್ವಾಗತಿಸಲು ಸಂದರ್ಶಿಸಲು ಕುತೂಹಲಿಗಳೂ ಉತ್ಸುಕರೂ ಆಗಿದ್ದ ಜನರು ರೈಲ್ವೇ ಸ್ಟೇಷನ್ನಲ್ಲಿಯೇ ಬಹುದೊಡ್ಡ ಸಂಖ್ಯೆಯಲ್ಲಿ ನೆರೆದಿದ್ದರು. ರೈಲ್ವೆ ನಿಲ್ದಾಣದಿಂದ ಆಶ್ರಮದವರೆಗಿನ ದಾರಿಯನ್ನೆಲ್ಲಾ ಸುಂದರವಾಗಿ ಅಲಂಕರಿಸಲಾಗಿತ್ತು. ಶ್ರೀಮಾತೆಯ ಕೃಪಾಕಟಾಕ್ಷವನ್ನು ಹೊಂದುವ ಹಂಬಲದಿಂದ ದಾರಿಯ ಎರಡೂ ಕಡೆಯಲ್ಲಿ ಜನರು ಕಿಕ್ಕಿರಿದು ನೆರೆದಿದ್ದರು. ಅವರೆಲ್ಲರೂ ಪುಷ್ಪಾಂಜಲಿಯ ಮೂಲಕ ತಮ್ಮ ತಮ್ಮ

ಭಕ್ತಿಯನ್ನು ಸಮರ್ಪಿಸಿದರು. (ಶ್ರೀಕೃಷ್ಣ ಮೊದಲಬಾರಿಗೆ ಮಥುರೆಗೆ ಬಂದ ದೃಶ್ಯವನ್ನು ಭಾಗವತ ಚಿತ್ರಿಸಿರುವುದನ್ನು ಇದು ನೆನಪಿಗೆ ತರುತ್ತದೆ). ಕಾರು ಆಶ್ರಮ ತಲುಪುವ ವೇಳೆಗೆ ಬಹುಸಂಖ್ಯೆಯಲ್ಲಿ ಅಲ್ಲಿ ಜನರು ನೆರೆದಿದ್ದರು. ಶ್ರೀಮಾತೆ ಈ ಸಂದರ್ಭವನ್ನು ಆಗಾಗ ನೆನಪಿಸಿಕೊಳ್ಳುತ್ತಾ ಹೇಳುತ್ತಿದ್ದರಂತೆ: ''ಬೆಂಗಳೂರಿನಲ್ಲಿ ನನ್ನನ್ನು ನೋಡುವುದಕ್ಕಾಗಿ ಎಷ್ಟೊಂದು ಜನ ಬಂದಿದ್ದರು! ರೈಲಿನಿಂದ ಇಳಿಯುತ್ತಿರುವಂತೆಯೇ ನನ್ನ ಮೇಲೆ ಹೂವಿನ ಮಳೆಗರೆದರು. ರಸ್ತೆಯುದ್ದಕ್ಕೂ ಹೂವು. ಶ್ರೀರಾಮಕೃಷ್ಣರ ಸಂದೇಶ ಎಲ್ಲೆಡೆಯೂ ಹರಡಿದೆ. ಆದ್ದರಿಂದಲೇ ಅಷ್ಟೊಂದು ಜನ ಬಂದಿರುವುದು.''

ಕಾರು ನಿಂತ ತಕ್ಷಣ ತುಳಸಿ ಮಹಾರಾಜ್ (ಸ್ವಾಮಿ ನಿರ್ಮಲಾನಂದರು) ಶ್ರೀಮಾತೆಯವರ ಪೂಜಾ ಸಾಮಗ್ರಿಗಳೊಡಗೂಡಿದ್ದ ಪೆಟ್ಟಿಗೆಯನ್ನು ತಮ್ಮ ತಲೆಯ ಮೇಲೆ ಹೊತ್ತುಕೊಂಡು ಆಶ್ರಮದ ಒಳಗೆ ಹೋದರು. ಬೆಂಗಳೂರು ರಾಮಕೃಷ್ಣ ಆಶ್ರಮ ಈಗಿನಂತೆ ಇರಲಿಲ್ಲ. ನಿವೇಶನ ಬಹಳ ದೊಡ್ಡದೇ ಆಗಿದ್ದರೂ ಅದರಲ್ಲಿ ನಿರ್ಮಾಣಗೊಂಡಿದ್ದ ಕಟ್ಟಡ ಚಿಕ್ಕದಾಗಿತ್ತು. ಒಂದು ಪುಟ್ಟ ದೇವರ ಕೋಣೆ ಹಾಗೂ ಹತ್ತು-ಹದಿನೈದು ಜನ ಕುಳಿತುಕೊಳ್ಳಬಹುದಾದಷ್ಟು ಒಂದು ಪ್ರಾರ್ಥನಾಗೃಹ ಇತ್ತು. ಈಗ ಶ್ರೀರಾಮಕೃಷ್ಣರು ಪೂಜೆಗೊಳ್ಳುತ್ತಿರುವ ಗರ್ಭಗೃಹ ಆಗ ಪ್ರಾರ್ಥನಾ ಮಂದಿರವಾಗಿತ್ತು. ಈಗ ಶ್ರೀಮಾತೆ ಶಾರದಾದೇವಿಯವರು ಪ್ರತಿಷ್ಠಿತರಾಗಿರುವ ಕೋಣೆ ಆಗ ಪೂಜಾಗೃಹವಾಗಿತ್ತು. ಶ್ರೀಮಾತೆಗೆ ದಕ್ಷಿಣದ ಕೋಣೆಯಲ್ಲಿ ಇಳಿದುಕೊಳ್ಳಲು ವ್ಯವಸ್ಥೆ ಮಾಡಲಾಗಿತ್ತು. ಅವರ ಒಡನಾಡಿಗಳಿಗೆ ಬೇರೆ ಒಂದು ಕೋಣೆಯಲ್ಲಿ ವ್ಯವಸ್ಥೆಯಾಗಿತ್ತು. ಸ್ವಾಮಿ ರಾಮಕೃಷ್ಣಾನಂದ (ಶಶಿ ಮಹಾರಾಜ್) ಮೊದಲಾದ ಸಾಧುಗಳು ಆಶ್ರಮದ ಆವರಣದಲ್ಲಿ ನಿರ್ಮಿಸಲಾಗಿದ್ದ ಟೆಂಟ್‌ಗಳಲ್ಲಿ ವಾಸಿಸಿದರು. ಶ್ರೀಮಾತೆಯವರ ಎಲ್ಲಾ ಅಗತ್ಯಗಳನ್ನೂ ಶಶಿ ಮಹಾರಾಜರೇ ನೋಡಿಕೊಳ್ಳುತ್ತಿದ್ದರು. ಆಶ್ರಮದ ಆವರಣದಲ್ಲಿ ಸುಂದರವಾದ ಹೂದೋಟವಿದ್ದಿತು. ಮಹಾರಾಜ್ ಆ ತೋಟದಲ್ಲಿ ಅರಳಿದ್ದ ಸುಗಂಧಪೂರ್ಣ ಸುಂದರ ಹೂವುಗಳನ್ನು ಬಿಡಿಸಿಕೊಂಡು ಬಂದು ಪ್ರತಿದಿನ ಶ್ರೀಮಾತೆಯ ಪಾದಕ್ಕೆ ಅರ್ಪಿಸುತ್ತಿದ್ದರು.

### ಬೆಂಗಳೂರು ಆಶ್ರಮದ ವಾಸ

ಶ್ರೀಮಾತೆಗೆ ಬೆಂಗಳೂರಿನ ಆಶ್ರಮ ಹಾಗೂ ಅಲ್ಲಿನ ಪ್ರಶಾಂತತೆ ತುಂಬಾ ಮೆಚ್ಚುಗೆಯಾಗಿತ್ತು. ಮುಂದೆಯೂ ಅವರ ಬೆಂಗಳೂರು ನಗರದ ಜನರ ಭಕ್ತಿಯನ್ನು ನೆನಪಿಸಿಕೊಳ್ಳುತ್ತಿದ್ದರಂತೆ. ಮೈಸೂರು ಸಂಸ್ಥಾನದ ದಿವಾನರಿಂದ (ಶ್ರೀ ಮಾಧವರಾವ್) ಹಿಡಿದು ಎಲ್ಲಾ ಸ್ತರಕ್ಕೆ ಸೇರಿದ ಭಕ್ತರೂ ಶ್ರೀಮಾತೆಯ ಸಂದರ್ಶನವನ್ನು ಪಡೆದರು. ಆ ಸಂದರ್ಭದಲ್ಲಿ ಅವರ ಅನುಗ್ರಹದಿಂದ ಪಾವನಗೊಂಡವರಲ್ಲಿ ರೋಗಿಗಳೂ ನೊಂದವರೂ, ಬಡವರೂ, ಎಲ್ಲಾ ಶ್ರೇಣಿಯವರೂ ಇದ್ದರು. ಶ್ರೀಮಾತೆಯವರ ಆಕರ್ಷಣೆ ಅಂತಹುದು. ಅವರು ಸುಮ್ಮನೆ ಒಂದು ಕೋಣೆಯಲ್ಲಿ ಕುಳಿತಿರುತ್ತಿದ್ದರು. ಸ್ವಲ್ಪ ಮುಗುಳ್ನಗುತ್ತಿದ್ದರು. ಅವರ ಸಂದರ್ಶನಕ್ಕೆ ಬರುತ್ತಿದ್ದ ಭಕ್ತರು ಹಿಡಿದು ತರುತ್ತಿದ್ದ ಹೂವುಗಳು ಸಂಜೆಯ ವೇಳೆಗೆ ಒಂದು ಗುಡ್ಡವೇ ಆಗಿರುತ್ತಿತ್ತು ಎಂದು ಪ್ರತ್ಯಕ್ಷದರ್ಶಿಗಳು ನೆನಪಿಸಿಕೊಳ್ಳುತ್ತಾರೆ.



ಶ್ರೀಮಾತೆಯವರ ಕೋಣೆ, ರಾಮಕೃಷ್ಣ ಮಠ, ಬೆಂಗಳೂರು

ಶ್ರೀಮಾತೆಯವರ ಶಿಷ್ಯರಾದ ವಿಶುದ್ಧಾನಂದರು ಹೀಗೆ ಬರೆದಿದ್ದಾರೆ: ''ಶ್ರೀಮಾತೆ ಆಶ್ರಮದಲ್ಲಿದ್ದಾಗ ಬಹುಸಂಖ್ಯೆಯಲ್ಲಿ ಜನರು ಬರುತ್ತಿದ್ದರು. ಬಂದವರು ಸಂಜೆ ೮ರ ನಂತರವೇ ತಮ್ಮ ತಮ್ಮ ಮನೆಗೆ ತೆರಳುತ್ತಿದ್ದರು. ಹೆಸರೇ ಕೇಳಿರದ ಬಂಗಾಳದ ಜಯರಾಮಬಾಟಿ ಎಂಬ ಒಂದು ಕುಗ್ರಾಮದಿಂದ ಬಂದ ಸ್ತ್ರೀಯ ಪ್ರಭಾವ ಕಲ್ಪನೆಗೂ ನಿಲುಕದ್ದು. ಆ ದಿನಗಳಲ್ಲಿ ಆಶ್ರಮ ಅಮ್ಮನ ನಾಮದ ನಿನಾದದಿಂದ ತುಂಬಿ ಹೋಗಿತ್ತು.'

ಒಂದು ದಿನ ಅಮ್ಮ ದೊಡ್ಡ ಹಾಲಿನಲ್ಲಿ ಕುಳಿತಿದ್ದರು. ಅವರ ಮಕ್ಕಳು ಅದೇ ಹಾಲ್‌ನ ಬೇರೆ ಭಾಗಗಳಲ್ಲಿ ಕುಳಿತಿದ್ದರು. ಇತರ ಕೋಣೆಗಳಲ್ಲಿ ಭಕ್ತರು ಒಬ್ಬರಿಗೊಬ್ಬರು ಅಂಟಿಕೊಂಡಂತೆ ಮೌನವಾಗಿ ಕುಳಿತಿದ್ದರು. ಎಲ್ಲೆಲ್ಲೂ ಗಾಢ ಮೌನ ತುಂಬಿತ್ತು. ಪ್ರತಿಯೊಬ್ಬರ ದೃಷ್ಟಿ ಅಮ್ಮನ ಮೇಲೇ ಕೇಂದ್ರೀಕೃತವಾಗಿತ್ತು. ಬಹಳ ಕಾಲದ ಈ ಪ್ರಶಾಂತ ಧ್ಯಾನ ಮನೋಭಾವದ ನಂತರ ಶ್ರೀಮಾತೆ ಸ್ವಾಮಿ ವಿಶುದ್ಧಾನಂದರಿಗೆ, ''ಇವರೆಲ್ಲರಿಗೆ ನೀನೇ ಒಂದೆರಡು ಮಾತುಗಳನ್ನು ಹೇಳು. ನಾನು ಅವರ ಭಾಷೆ ಅರಿತಿದ್ದರೆ ಅವರಿಗೆಷ್ಟು ಆನಂದವಾಗುತ್ತಿತ್ತೋ ಏನೋ'' ಎಂದರು. ಈ ಮಾತುಗಳನ್ನು ಇಂಗ್ಲಿಷಿಗೆ ಭಾಷಾಂತರಿಸಿ ಆ ಹಾಲ್‌ನಲ್ಲಿ ಸ್ವಾಮೀಜಿ ಘೋಷಿಸಿದರು. ಆಗ ಅಲ್ಲಿದ್ದ ಇಬ್ಬರು ಹಿರಿಯ ಭಕ್ತರು ಮೇಲೆದ್ದು ನಿಂತು ಕೈಮುಗಿದು ಅಲ್ಲಿ ನೆರೆದಿದ್ದ ಎಲ್ಲಾ ಭಕ್ತರ ಪರವಾಗಿ ಹೇಳಿದರು: ''ನಮಗೆ ಇನ್ನೇನೂ ಬೇಕಿಲ್ಲ, ಶ್ರೀಮಾತೆಯ ದಿವ್ಯ ಸಾನ್ನಿಧ್ಯದ ಅಮೃತರಸ

ದಿಂದ ನಮ್ಮ ಹೃದಯ ತುಂಬಿದೆ. ಅವರ ಮಾತೃತ್ವದ ಮಾಧುರ್ಯ ನಮ್ಮನ್ನು ಸ್ತಂಭೀಭೂತರನ್ನಾಗಿಸಿದೆ ..'' ಎಂದರು. ಎಂತಹ ರಮಣೀಯ ಅದ್ಭುತ ಭಾವತರಂಗ ! ಪ್ರೇಮಕ್ಕೆ ಭಾಷೆ ಬೇಕಿಲ್ಲ. ಶ್ರೀಮಾತೆಯ ಪ್ರೇಮಪ್ರವಾಹ ಆ ಕೋಣೆಯಲ್ಲೆಲ್ಲಾ ತುಂಬಿತ್ತು. ಭಕ್ತರಿಗೆ ಅಷ್ಟೇ ಸಾಕಾಗಿತ್ತು.

### ಅನುಗ್ರಹಮೂರ್ತಿಯಾಗಿ ಶ್ರೀಮಾತೆ

ಬೆಂಗಳೂರಿನ ಜನತೆಯ ಮೇಲೆ ಶ್ರೀಮಾತೆಯ ಅನುಗ್ರಹ ನಾನಾ ವಿಧವಾಗಿ ಹರಿಯಿತು. ಅಮ್ಮ ಕೆಲವರನ್ನು ತನ್ನ ಓರೆ ನೋಟದಿಂದ (ಕೃಪಾಕಟಾಕ್ಷ ಮಾತ್ರದಿಂದ) ಅನುಗ್ರಹಿಸಿದರು. ಕೆಲವರಿಗೆ ಮಂತ್ರದೀಕ್ಷೆ ನೀಡಿದರು. ಕೆಲವರಿಗೆ ಹಿತನುಡಿಗಳನ್ನು ಉಪದೇಶದ ಕೆಲವು ಮಾತುಗಳನ್ನು ಹೇಳಿದರು. ಹೀಗೆ ಶ್ರೀಮಾತೆಯ ದೈವೀ ಭಾವದ ದಿವ್ಯಾಭಿವ್ಯಕ್ತಿ ಪ್ರಕಟಗೊಂಡಿತು. ಭಕ್ತವೃಂದ ಮಾತೆಯ ಈ ಅನುಗ್ರಹಕ್ಕಾಗಿ ಹಂಬಲಿಸುತ್ತಾ ಆಶ್ರಮಕ್ಕೆ ಮುಗಿಬೀಳತೊಡಗಿತು.

ಶ್ರೀ ನಾರಾಯಣ ಐಯ್ಯಂಗಾರ್ ಹಾಗೂ ಅವರ ಮಕ್ಕಳಿಗೆ, ರಾಜಗೋಪಾಲ್ ನಾಯಿಡು ಮೊದಲಾದವರಿಗೆ ಅಮ್ಮ ಮಂತ್ರ ದೀಕ್ಷೆ ನೀಡಿದರು. ಈ ರೀತಿ ಅಮ್ಮನಿಂದ ಮಂತ್ರದೀಕ್ಷೆ ಪಡೆದ ಧನ್ಯಜೀವಿ ಪುಣ್ಯಜೀವಿಗಳಲ್ಲಿ ಆದಿಮೂಲಂ ಕೂಡ ಒಬ್ಬರು. ಆಗ ಆದಿಮೂಲಂ ಸಣ್ಣ ಹುಡುಗ. ಆ ಹುಡುಗ ಅಮ್ಮ ಕುಳಿತಿರುತ್ತಿದ್ದ ಕೋಣೆಯ ಕಿಟಕಿಯ ಮೂಲಕ ಇಣುಕಿ ನೋಡುತ್ತಿದ್ದುದು ಶ್ರೀಮಾತೆಯ ದೃಷ್ಟಿಗೆ ಬಿದ್ದಿತು. ಅವರ ಅಪೇಕ್ಷೆಯಂತೆ ಆ ಹುಡುಗನ ಪೂರ್ವಾಪರ ವಿಚಾರಿಸಲಾಗಿ ಅವನು ಕೊಳಚೆ ಪ್ರದೇಶಕ್ಕೆ ಸೇರಿದವನಾಗಿದ್ದ ಎಂದು ತಿಳಿಯಿತು. ಆದರೂ ಅಮ್ಮ ಆ ಹುಡುಗನನ್ನು 'ಒಳಗೆ ಬಾ' ಎಂದು ಕರೆದರು. ಆ ಹುಡುಗನ ಬಟ್ಟೆ ಅಲ್ಲಲ್ಲಿ ಹರಿದುಹೋಗಿತ್ತು. ಅವನ ತಲೆ ಎಣ್ಣೆ ಕಾಣದೆ ಎಷ್ಟು ದಿನವಾಗಿತ್ತೋ, ಕೂದಲು ಬಾಚದೆ ಜಡ್ಡುಗಟ್ಟಿ ಕೆದರಿತ್ತು. ಶ್ರೀಮಾತೆ ಅವನ ತಲೆಗೆ ಎಣ್ಣೆ ಹಚ್ಚಿ ಚೆನ್ನಾಗಿ ಬಾಚಣಿಗೆಯಿಂದ ಬಾಚಿದರು. ತಮ್ಮ ಕೈಯಾರೆ ಅವನಿಗೆ ಪ್ರಸಾದ ತಿನ್ನಿಸಿದರು. ಅವರ ಅಪೇಕ್ಷೆಯಂತೆ ಅವನಿಗೆ ಒಂದು ಒಳ್ಳೆಯ ವಸ್ತ್ರವನ್ನೂ ಕೊಡಿಸಲಾಯಿತು. ಶ್ರೀಮಾತೆ ಆ ಕಾಲದಲ್ಲಿ ಬಹುವಾಗಿ ಆಚರಣೆಯಲ್ಲಿದ್ದ ಸಂಕುಚಿತ ಆಚಾರ ವಿಚಾರಗಳನ್ನೆಲ್ಲಾ ಕಡೆಗಣಿಸಿ ಆ ಕಂದನಿಗೆ ಮಂತ್ರೋಪದೇಶ ನೀಡಿದರು. ಅದು ಆ ಕಾಲದ ಸಮಾಜಕ್ಕೆ ಮಹಾಕ್ರಾಂತಿ, ಶ್ರೀಮಾತೆಯವರ ಈ ನಡೆ ಅವರ ವಿಶಾಲಮನೋಭಾವದ ವಿಶ್ವ ಭಾವೈಕ್ಯತೆಯ ದ್ಯೋತಕ.

ಆ ಹುಡುಗ ಆದಿಮೂಲಂ ಮುಂದೆ ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಉದ್ಯೋಗಕ್ಕೆ ಸೇರಿದರು. ಆದರೂ ಆಶ್ರಮದ ಸಂಪರ್ಕದಲ್ಲಿದ್ದುಕೊಂಡು ತಮ್ಮ ಕೈಯಲ್ಲಾದ ಸೇವೆಯನ್ನು ಆಶ್ರಮಕ್ಕೆ ಸಲ್ಲಿಸುತ್ತಲೇ ಇದ್ದರು. ೧೯೫೧ ರಲ್ಲಿ ಸ್ವಾಮಿ ಯತೀಶ್ವರಾನಂದರು ಅಧ್ಯಕ್ಷರಾಗಿದ್ದಾಗಲೂ ಅವರು ಆಶ್ರಮಕ್ಕೆ ವಿವಿಧ ರೀತಿಯಲ್ಲಿ ಸೇವೆ ಮಾಡಿದರು.

ಒಂದು ದಿನ ಅಮ್ಮ ಆಶ್ರಮದ ಹಾಲ್‌ನ ಒಂದು ಮೂಲೆಯಲ್ಲಿ ಸಾಧಾರಣ ಸೀರೆ ಉಟ್ಟುಕೊಂಡು ಕುಳಿತಿದ್ದರು. ಸ್ವಲ್ಪ ಹೊತ್ತಿಗೆ ಚೆನ್ನಾಗಿ ಚಿನ್ನದ ಆಭರಣಗಳಿಂದ ಅಲಂಕರಿಸಿಕೊಂಡ ವೈಭವದ ರೇಶಿಮೆಯ ಸೀರೆಯನ್ನುಟ್ಟುಕೊಂಡಿದ್ದ ಹೆಂಗಸರೊಬ್ಬರು ಬಂದರು. ಅವರು ಹಾಲ್‌ನ ಮಧ್ಯಭಾಗದಲ್ಲಿ ಕುಳಿತರು. ಆ ನಂತರ ಬಂದ ಕೆಲವು ಭಕ್ತರು ಆಕೆಯನ್ನೇ ಶ್ರೀಮಾತೆ ಎಂದು ತಿಳಿದು ಆಕೆಗೆ ನಮಸ್ಕಾರ ಮಾಡಲು ಮುಂದಾದರು. ಆಕೆ ತಾನು ಶ್ರೀಮಾತೆ ಅಲ್ಲ ಎಂದು ಎಷ್ಟು ಹೇಳಿದರೂ ಜನ ಕೇಳಲಿಲ್ಲ. ಆಕೆ ಆ ಹಾಲ್‌ನಿಂದ ಓಡಿಹೋಗಬೇಕಾಯಿತು. ಈ ಪ್ರಸಂಗವನ್ನು ನೋಡುತ್ತಿದ್ದ ಶ್ರೀಮಾತೆ ಶ್ರೀಮಂತಿಕೆಯ ಮಹಿಮೆಯನ್ನು ಕಂಡು ಬೆರಗಾಗಿದ್ದರು. ಸೋದರಿ ದೇವಮಾತಾ ಈ ಪ್ರಸಂಗದ ನೆನಪಿನಲ್ಲಿ ಹೇಳುತ್ತಾರೆ: ''ಶ್ರೀಮಾತೆಯ ಸರಳತೆಯ ಪರದೆಯ ಒಳಗೆ ಅಂತರಂಗದ ಸಾಮ್ರಾಟನ ಪ್ರಕರ್ಷ ಪ್ರಭೆ ಬೆಳಗುತ್ತಿತ್ತು. ಆ ಪ್ರಭೆ ಇತರರನ್ನು ಅವರೆಡೆಗೆ ಆಕರ್ಷಿಸುತ್ತಿತ್ತು ಭಾವಭಕ್ತಿಯಿಂದ ತಲೆಬಾಗುವಂತೆ ಮಾಡುತ್ತಿತ್ತು''


*(ಶತಮಾನೋತ್ಸವ ಸ್ಮರಣೆ, ಪುಟ ೬೩)*

### ಶ್ರೀಮಾತೆಯವರ ದೈವಿಕತೆ

ಶ್ರೀಮಾತೆ ತಮ್ಮ ಭಾವನೆಯನ್ನು ಭಾಷೆಯ ಮೂಲಕ ವ್ಯಕ್ತಪಡಿಸಲಾಗದಿದ್ದಾಗೆಲ್ಲಾ ತನ್ನ ಅಲೌಕಿಕ ಶಕ್ತಿಯಿಂದ ಅದನ್ನು ಭಕ್ತರ ಹೃದಯಕ್ಕೆ ಮುಟ್ಟಿಸುತ್ತಿದ್ದರು. ಈ ರೀತಿಯ ಘಟನೆಗಳಿಗೆಲ್ಲಾ ಸ್ವಾಮಿ ವಿಶುದ್ಧಾನಂದರು ಸಾಕ್ಷಿಯಾಗಿದ್ದರು. ಒಂದು ದಿನ ಮಧ್ಯಾಹ್ನ ಸುಮಾರು ೨.೩೦-೩ರ ಸಮಯ. ಆಶ್ರಮ ನಿರ್ಜನವಾಗಿತ್ತು. ಸಮೀಪದ ಗವಿಗಂಗಾಧರೇಶ್ವರನ ದರ್ಶನಕ್ಕಾಗಿ ಶ್ರೀಮಾತೆಯವರನ್ನು ಕಾರಿನಲ್ಲಿ ಕರೆದುಕೊಂಡು ಹೋದರು. ಅವರು ಗುಹಾಂತರ್ದೇವಾಲಯದಲ್ಲಿ ದೇವರ ದರ್ಶನ ಮುಗಿಸಿ ಆಶ್ರಮಕ್ಕೆ ಹಿಂದಿರುಗುವ ವೇಳೆಗೆ ಆಶ್ರಮದ ಆವರಣ ಜನರಿಂದ ತುಂಬಿಹೋಗಿತ್ತು. ಜನರನ್ನು ನೋಡಿದ ಶ್ರೀಮಾತೆ ಕಾರಿನಿಂದ ಇಳಿದುಬಿಟ್ಟರು. ಅವರಿಗೆ ಕಾಲಿನಲ್ಲಿ ಬಹಳ ವೇದನೆ ಇತ್ತು. ಆದರೂ ಅವರು ಕಾಲೆಳೆದುಕೊಂಡು ಜನರಿಗಾಗಿ ಜನರ ನಡುವೆ ನಡೆಯತೊಡಗಿದರು. ಅಮ್ಮನನ್ನು ನೋಡುತ್ತಿದ್ದಂತೆ ಜನ ಸಮೂಹ ಉಕ್ಕಿ ಬರುತ್ತಿದ್ದ ಭಕ್ತಿ ಉತ್ಸಾಹಗಳಿಂದ ತಾಯಿಗೆ ನಮಸ್ಕರಿಸಿದರು. ಶ್ರೀಮಾತೆ ಅವರ ಭಕ್ತಿಭಾವಗಳಿಂದ ಭಾವಸಮಾಧಿ ಸ್ಥಿತಿಗೇರಿದರು. ಆಗ ಅವರು ಅಲ್ಲಿ **ವರದಾಭಯ ಮುದ್ರೆ**ಯಲ್ಲಿ ನಿಶ್ಚೇಷ್ಟರಾಗಿ ವಿಗ್ರಹದಂತೆ ನಿಂತುಬಿಟ್ಟರು. ಅವರು ಎಲ್ಲಿ ಬಿದ್ದು ಹೋಗುವರೋ ಎಂಬ ಭಯ ಸ್ವಾಮಿಗಳ ಹೃದಯದಲ್ಲಿ ತುಂಬಿತ್ತು. ಆದರೆ ಶ್ರೀಮಾತೆಯನ್ನು ಆ ದಿವ್ಯಭಾವದಲ್ಲಿ ಕಂಡು ಧನ್ಯರಾದ ಭಕ್ತರ ಹೃದಯ ಅಪಾರವಾದ ಆನಂದ ಸಾಗರದಲ್ಲಿ ಲೀನವಾಗಿ ಹೋಗಿತ್ತು. ಸ್ವಲ್ಪ ಹೊತ್ತಿನ ನಂತರ ಅವರು ಮಾಮೂಲಿ ಸ್ಥಿತಿಗೆ ಹಿಂದಿರುಗಿದರು. ಆಗ ಅಲ್ಲಿ ನೆರೆದಿದ್ದ ಜನರೆಲ್ಲ ಇವರ ಅಸಾಧಾರಣ ಅಲೌಕಿಕ ಭಾವವನ್ನು ಗ್ರಹಿಸಿ ಜೋರಾಗಿ ''ಇವರು ನಮ್ಮೆಲ್ಲರ ತಾಯಿ!'', ''ಜಗಜ್ಜನನಿ'' ಎಂದು ಉದ್ಗರಿಸಿದರು.

### ಶ್ರೀಮಾತೆಯವರ ಶಿಲೆ

ಒಂದು ದಿನ ಸಂಜೆ ಅಮ್ಮ ಸೂರ್ಯಾಸ್ತದ ಸಮಯದಲ್ಲಿ ಅವರ ಕೋಣೆಯಿಂದ ಹೊರಗೆ ಬಂದರು. ಅವರೊಡನೆ ಅವರ ಒಂದಿಬ್ಬರು ಸಂಗಾತಿಯರೂ ಇದ್ದರು. ಸೂರ್ಯಾಸ್ತದ ಸುಂದರ


ಶ್ರೀಮಾತೆಯವರು ಕುಳಿತ ಶಿಲೆ - ೧೯೧೧ರಲ್ಲಿ

ದೃಶ್ಯವನ್ನು ಮತ್ತೂ ಸ್ಪಷ್ಟವಾಗಿ ಚೆನ್ನಾಗಿ ನೋಡಿ ಆಸ್ವಾದಿಸಬೇಕೆಂಬ ಭಾವದಿಂದ ಶ್ರೀಮಾತೆ ಅಲ್ಲಿಯೇ ಆಶ್ರಮದ ಆವರಣದೊಳಗೆ ಇದ್ದ ಸ್ವಲ್ಪ ಎತ್ತರದ ಜಾಗಕ್ಕೆ ಹೋದರು. ಅಲ್ಲೇ ಇದ್ದ ಒಂದು ಎತ್ತರದ ದೊಡ್ಡ ಶಿಲೆಯನ್ನು ಏರಿದರು. ಆಗ ಅಲ್ಲಿ ವಾತಾವರಣ ದಲ್ಲುಂಟಾಗಿದ್ದ ಪ್ರಶಾಂತತೆ, ಪ್ರಕೃತಿ ಸೌಂದರ್ಯ ಶ್ರೀಮಾತೆ ಯವರನ್ನು ಸ್ವಲ್ಪ ಕಾಲ ಆ ಶಿಲೆಯ ಮೇಲೆ ಕುಳಿತುಕೊಳ್ಳುವಂತೆ ಮಾಡಿತು. ಒಂದೇ ಕ್ಷಣದಲ್ಲಿ ಅವರು ಗಾಢ ಧ್ಯಾನದಲ್ಲಿ ಮುಳುಗಿ ಹೋದರು.

ಶ್ರೀಮಾತೆ ಆ ದೊಡ್ಡ ಶಿಲೆಯ ಕಡೆಗೆ ಹೋದ ವಿಷಯ ಸ್ವಾಮಿ ರಾಮಕೃಷ್ಣಾನಂದರಿಗೆ ತಿಳಿಯಿತು. ಅವರು ಆ ಕಡೆಗೆ ಧಾವಿಸಿ ಬಂದು ಅಮ್ಮ ಮುಳುಗಿದ್ದ ದಿವ್ಯಭಾವದ ದರ್ಶನ ಮಾಡಿದರು. ಅಮ್ಮನ ಬಳಿಗೆ ಹೋಗಿ, 'ದೇವೀಮಹಾತ್ಮ್ಯ'ದ ನಾರಾಯಣೀ ಸ್ತುತಿಯ ಪ್ರಸಿದ್ಧವಾದ ('ಸರ್ವಮಂಗಳ ಮಾಂಗಲ್ಯೇ, 'ಸೃಷ್ಟಿ ಸ್ಥಿತಿ...', 'ಶರಣಾಗತ ದೀನಾರ್ತ..') ಮೂರು ಶ್ಲೋಕಗಳನ್ನು ಹೇಳುತ್ತಾ ನಮಸ್ಕರಿಸಿದರು. ''ಅಮ್ಮ '**ಪರ್ವತವಾಸಿನಿ**'ಯಾಗಿ ಬಿಟ್ಟರು..'' ಎಂದು ಉದ್ಗರಿಸುತ್ತಾ ಪುಳಕಿತರಾದರು. ಮತ್ತು ದೀನ ರಾಗಿ ಅಮ್ಮನ ಪಾದದ ಬಳಿ ಕುಳಿತು ''ಕೃಪಾ ಕೃಪಾ'' ಎಂದು ದೀನರಾಗಿ ಕೃಪೆಗಾಗಿ ಪ್ರಾರ್ಥಿಸುತ್ತಿದ್ದ ಸ್ವಾಮೀಜಿಯವರ ತಲೆಯ ಮೇಲೆ ಶ್ರೀಮಾತೆ ಮೃದುವಾಗಿ ಕೈಯಾಡಿಸಿದರು. ಆಗ ಅಲ್ಲಿಗೆ ಬಂದ ಸ್ವಾಮಿ ನಿರ್ಮಲಾನಂದರು (ತುಳಸಿ ಮಹಾರಾಜ್) ಶ್ರೀಮಾತೆ ಯವರನ್ನು ಆ ಶಿಲೆಯ ಮೇಲೆ ಕುಳಿತು ಸ್ವಲ್ಪ ಜಪಿಸಬೇಕೆಂದು ಪ್ರಾರ್ಥಿಸಿದರು.

ಅಂದಿನಿಂದ ಆ ಶಿಲೆ 'ಶ್ರೀಮಾತೆಯವರ ಶಿಲೆ' ಎಂದು ಪ್ರಸಿದ್ಧಿ ಯನ್ನು ಪಡೆಯಿತು. ಶ್ರೀಮಾತೆಯ ಸಂಪರ್ಕದಿಂದ ಆ ಶಿಲೆ ಸುರ ಧೇನು ಕಲ್ಪವೃಕ್ಷ ಚಿಂತಾಮಣಿಯಾಯಿತು. ಅದು ಒಂದು ತೀರ್ಥ ಕ್ಷೇತ್ರವಾಯಿತು. ಅನೇಕ ವಿಧ ಭಕ್ತರು ತಮ್ಮ ತಮ್ಮ ಹೃದಯಗಳ ಅರಿಕೆಯನ್ನು ಆ ಶಿಲೆಗೆ ಅರುಹಿ ತಮ್ಮ ತಮ್ಮ ಬಾಧೆಗಳಿಂದ ಬಿಡು ಗಡೆ ಹೊಂದಿದರು, ಇಂದಿಗೂ ಹೊಂದುತ್ತಿರುವರು. ಶ್ರೀಮಾತೆ ಕುಳಿತಿದ್ದ ಆ ಶಿಲೆಯಲ್ಲಿ ಈಗ ಸ್ವಲ್ಪ ಬದಲಾವಣೆಗಳನ್ನು ಮಾಡ ಲಾಗಿದೆ. ಅಲ್ಲಿ ಶ್ರೀಮಾತೆಯವರ ಒಂದು ಭಾವಚಿತ್ರವನ್ನಿರಿಸಿ ಅದಕ್ಕೊಂದು ಸಣ್ಣ ಮಂಟಪವನ್ನು ಕಟ್ಟಲಾಗಿದೆ.

ಅದರ ಸಂರಕ್ಷಣೆಗಾಗಿ ಅದರ ಸುತ್ತ ಒಂದು ಆವರಣವನ್ನೂ ಕಟ್ಟಲಾಗಿದೆ. ಶ್ರೀಮಾತೆಯ ಮಂಟಪದ ಮೇಲೆ ಒಂದು ಶ್ರೀಚಕ್ರ ವನ್ನೂ ಇರಿಸಲಾಗಿದೆ. ಪ್ರತಿದಿನ ಆಶ್ರಮದ ಒಬ್ಬರು ಸಾಧುಗಳು (ಅಥವಾ ಬ್ರಹ್ಮಚಾರಿಯೊಬ್ಬರು) ಅಲ್ಲಿಗೆ ಹೋಗಿ ಶ್ರೀಮಾತೆಗೆ ಪುಷ್ಪಾಂಜಲಿ ಅರ್ಪಿಸಿ ನೀರಾಜನ ಬೆಳಗುತ್ತಾರೆ. ಅದು ಅವರ ಸಾನ್ನಿಧ್ಯ ಇನ್ನೂ ಅಲ್ಲಿದೆ ಎಂಬ ಭಾವವನ್ನುಂಟುಮಾಡುತ್ತದೆ.


ಶ್ರೀಮಾತೆಯವರ ಶಿಲಾಸನ, ಬೆಂಗಳೂರು (ಈಚಿನ ಚಿತ್ರ)

ಎಷ್ಟೋ ಜನ ಭಕ್ತರು ಆ ಶಿಲೆಯ ಸುತ್ತಮುತ್ತಲಿನ ದೊಡ್ಡ ಜಾಗದ ಆ ಸುತ್ತಲಿನ ಆವರಣದಲ್ಲಿ ಕುಳಿತು ಜಪಧ್ಯಾನಗಳನ್ನು ಮಾಡುತ್ತಾರೆ. ಶ್ರೀಮಾತೆ ದೇಹರೂಪದಲ್ಲಿ ಇಲ್ಲ. ಆದರೂ ಅವರು ತಾತ್ತ್ವಿಕವಾಗಿ ಮರೆಯಾಗಿಲ್ಲ. ಪ್ರೀತಿಯಿಂದ ಹೃದಯ ಶುದ್ಧತೆಯಿಂದ ಬಯಸಿದರೆ ನಾವು ಅವರೊಡನೆ ಇಂದಿಗೂ ಒಂದಾಗಬಹುದು. ಅವರು ರಕ್ಷಿಸುತ್ತಿರುವುದನ್ನು ಕಾಣಬಹುದು. ಇದಕ್ಕೆ ಸಾವಿರಾರು ನಿದರ್ಶನಗಳಿವೆ. ಅನುಭವಿಗಳು ತಾವೇ ಹೇಳಿಕೊಂಡಿರುವ ಅನೇಕ ಘಟನೆಗಳಿವೆ.

ಶ್ರೀಮಾತೆಯ ಪಾವನ ಪಾದಾರವಿಂದಗಳಿಂದ ಪವಿತ್ರರಾದ ಆಶ್ರಮದ ಭಕ್ತರು ಆ ಅನುಭೂತಿ ಮುಂದೆ ಬರುವ ಭಕ್ತರಿಗೂ ಲಭಿಸಲಿ ಎಂಬ ಭಾವದಿಂದ ಶ್ರೀಮಾತೆಯನ್ನು ಪ್ರಾರ್ಥಿಸಿಕೊಂಡು ಒಂದು ನಿರ್ಮಲ ವಸ್ತ್ರದ ಮೇಲೆ ಅವರ ಪಾದ ಚಿಹ್ನೆಯ ಮುದ್ರೆ ಪಡೆದುಕೊಂಡರು. ಅದನ್ನು ಈಗಲೂ ದೇವಾಲಯದಲ್ಲಿರಿಸಲಾಗಿದೆ. ಅಹೇತುಕ ಕೃಪಾಸಿಂಧುವಾದ ಅಮ್ಮನ ಆ ಪಾದಾರವಿಂದಗಳಲ್ಲೂ ತಮ್ಮ ತಮ್ಮ ಹೃದಯದಾಳದ ಅಹವಾಲನ್ನು ಸಂಕಷ್ಟಗಳನ್ನು ಅರ್ಪಿಸಿಕೊಂಡು ಇಂದಿಗೂ ತಮ್ಮ ಬಾಧೆಗಳಿಂದ ಮುಕ್ತರಾಗಿ ಸುಖ ಶಾಂತಿ ನೆಮ್ಮದಿಗಳನ್ನು ಪಡೆಯುತ್ತಿರುವ ಅನೇಕ ಮಂದಿ ಭಕ್ತರಿದ್ದಾರೆ.

### ಉಪಸಂಹಾರ

ಶ್ರೀಮಾತೆಯ ಕೃಪೆ ಅನುಗ್ರಹಗಳಿಂದ ಬೆಂಗಳೂರು ಜನತೆ ಅವರ ಪವಿತ್ರ ಸಾನ್ನಿಧ್ಯವನ್ನು ಪಡೆಯಿತು. ಸ್ವಾಮಿ ವಿವೇಕಾನಂದರ ಆದೇಶದಂತೆ ದಕ್ಷಿಣಕ್ಕೆ ಬಂದ ಸ್ವಾಮಿ ರಾಮಕೃಷ್ಣಾನಂದರು ಈ ಬೆಂಗಳೂರಿನ ಮಠವನ್ನು ಸ್ಥಾಪಿಸಿದರು. ಶ್ರೀಮಾತೆಯವರನ್ನು ಇಲ್ಲಿಗೆ ಕರೆತಂದು ಇದನ್ನು ಪವಿತ್ರತಮ ತೀರ್ಥಕ್ಷೇತ್ರವಾಗಿಸಿದರು. ಶ್ರೀಮಾತೆಯವರ ಕೃಪಾಶೀರ್ವಾದದ ಅಮೃತಧಾರೆ ಇಂದಿಗೂ ಇಲ್ಲಿ ಜೀವಂತವಾಗಿ ಪ್ರವಹಿಸುತ್ತಿದೆ. ಶ್ರದ್ಧಾ ವಿಶ್ವಾಸ ನಿಷ್ಠೆಗಳಿಂದ ಶುದ್ಧ ಹೃದಯದಿಂದ ಆಶ್ರಯಿಸಿದ ಪ್ರತಿಯೊಬ್ಬ ಭಕ್ತನೂ ಈ ಅಮೃತವನ್ನು ಅನುಭವಿಸುತ್ತಿದ್ದಾನೆ. ಶ್ರೀಮಾತೆಯವರೇ ಘೋಷಿಸಿರುವಂತೆ ''ನನ್ನ ಸಂತಾನವನ್ನು ನರಕಕ್ಕೆಳೆಯಲು ಯಮನಿಗೂ ಸಾಧ್ಯವಿಲ್ಲ'' *('ಶಾರದಾದೇವಿ ಜೀವನ ಗಂಗಾ ಪು. ೫೩೬).*

ಶ್ರೀರಾಮಕೃಷ್ಣರ ಪಾದಧೂಳಿ ತಮ್ಮ ಮನೆಯ ಕೊಠಡಿಯಲ್ಲಿ ಬೀಳಬೇಕೆಂದು ಅವರ ಗೃಹೀ ಭಕ್ತೆ ಗಣೂ ತಾಯಿಯು ಅವರನ್ನು ಆಗ್ರಹಪೂರ್ವಕವಾಗಿ ಪ್ರಾರ್ಥಿಸಿಕೊಳ್ಳುತ್ತಾಳೆ. 'ಆ ಮೂಲಕ ಆ ಸ್ಥಳ ಕಾಶಿಯೇ ಆಗಿಬಿಡುತ್ತದೆ. ಮುಂದೆ ಯಾರೇ ಆಗಲಿ, ಆ ಕೊಠಡಿಯಲ್ಲಿ ಮೃತಪಟ್ಟರೆ, ಅವರಿಗೆ ಪುನರ್ಜನ್ಮದ ಕೋಟಲೆ ಇರದು' ಎಂದು ಆಕೆಯ ಭಾವನೆ. *(ಶ್ರೀರಾಮಕೃಷ್ಣ ವಚನವೇದ, ಭಾಗ ೨, ಪು.೪೦೩)* — ಈ ಮಾತು ಅವರ ಲೀಲಾಸಹಚರಿ ಶ್ರೀಮಾತೆಯವರು ಪಾದಾರ್ಪಣೆ ಮಾಡಿ, ಹಲವು ದಿನ ವಾಸವಿದ್ದು ತಮ್ಮ ಇರುವಿಕೆ, ಸಾಧನೆಗಳಿಂದ ಪಾವನಗೊಳಿಸಿದ ಬೆಂಗಳೂರು ರಾಮಕೃಷ್ಣ ಮಠದ ಕಣಕಣಕ್ಕೂ ಅನ್ವಯಿಸುತ್ತದೆ. ಅಲ್ಲಿ ಹೆಜ್ಜೆ ಇರಿಸಿದ ಧನ್ಯಜೀವಿ ಮತ್ತೆ ಜನ್ಮದ ಕೋಟಲೆಯನ್ನು ಹೊಂದಲಾರ ಎಂಬ ಪೂರ್ಣ ವಿಶ್ವಾಸದಿಂದ ನಮ್ಮೆಲ್ಲರ ಭಾರವನ್ನು ನಿಶ್ಚಿಂತೆಯಿಂದ ಅವರಿಗೊಪ್ಪಿಸಿಕೊಂಡುಬಿಟ್ಟರೆ, ಅವರು ಸಕಾಲದಲ್ಲಿ ನಮ್ಮನ್ನು ನಿತ್ಯಾನಂದ ಧಾಮಕ್ಕೆ ಕರೆದೊಯ್ಯುತ್ತಾರೆ – ಇದಕ್ಕೆ ಸಂಶಯವಿಲ್ಲ. ✽


### ಗ್ರಂಥ ಋಣ:

*'ಶ್ರೀಶಾರದಾದೇವಿ ಜೀವನಗಂಗಾ', ಸ್ವಾಮಿ ಪುರುಷೋತ್ತಮಾನಂದ*

*'ಶ್ರೀಮಾತೆ ಶಾರದಾದೇವಿ', ಸ್ವಾಮಿ ನಿತ್ಯಸ್ಥಾನಂದ*

*'ಶ್ರೀ ಶಾರದಾದೇವಿ' ಸ್ವಾಮಿ ಸೋಮನಾಥಾನಂದ*

*ಬೆಂಗಳೂರು ಆಶ್ರಮದ ಶತಮಾನೋತ್ಸವ ಸ್ಮರಣಗ್ರಂಥ, ('A Spiritual Centre Blossoms', 2007)*

*ಕಠ ಉಪನಿಷತ್*

*ಶ್ರೀಮದ್ಭಾಗವತ ಮಹಾಪುರಾಣ*

*ಶ್ರೀಮದ್ವಾಲ್ಮೀಕಿ ರಾಮಾಯಣ*


## ಶ್ರೀಮಾತೆಯವರ ಕೃಪೆ

ಕಾಲೇಜು ವಿದ್ಯಾರ್ಥಿಯೊಬ್ಬ ಶ್ರೀಮಾತೆಯವರ ಬಳಿಗೆ ಆಗಾಗ ಬರುತ್ತಿದ್ದ. ಒಂದು ದಿನ ಅವನು ಅವರಿಂದ ಬೀಳ್ಕೊಳ್ಳುವಾಗ ಹೇಳಿದ: ''ಅಮ್ಮಾ, ನಾನು ಈ ಸ್ಥಳಕ್ಕೆ ಯೋಗ್ಯ ವ್ಯಕ್ತಿಯಲ್ಲ. ನಾನು ಶಾಶ್ವತವಾಗಿ ವಿದಾಯ ಹೇಳುತ್ತೇನೆ.'' ತಕ್ಷಣ ಅವನು ಅಲ್ಲಿಂದ ಹೊರಟ. ಶ್ರೀಮಾತೆಯವರು ಅವನ ಹಿಂದೆ ಓಡಿಹೋಗಿ, ಅವನ ಶರ್ಟನ್ನು ಹಿಡಿದೆಳೆದು, ಅವನನ್ನು ತಮ್ಮ ಬಳಿಗೆ ಸೆಳೆದು, ಅವನ ಭುಜದ ಮೇಲೆ ಕೈಯಿಟ್ಟರು. ಅವನ ಕಣ್ಣಲ್ಲೇ ಕಣ್ಣಿಟ್ಟು ನೋಡಿ, ದೃಢವಾದ ಧ್ವನಿಯಿಂದ ಹೇಳಿದರು: ''ನಿನ್ನ ಮನಸ್ಸಿಗೆ ಎಂದಾದರೂ ಚಂಚಲಗೊಳಿಸುವ ಯೋಚನೆ ಬಂದರೆ, ನನ್ನ ನೆನಪು ಮಾಡಿಕೋ. ಚಿಂತಿಸಬೇಡ.'' ಈ ಮಾತುಗಳನ್ನು ಹೇಳಿದ ನಂತರ ಅವನನ್ನು ಕಳುಹಿಸಿಕೊಟ್ಟರು. ಅವನು ಮನೆಗೆ ಹೋಗುತ್ತಾ ಶ್ರೀಮಾತೆಯವರ ಮಾತುಗಳನ್ನೇ ಪದೇ ಪದೇ ತನಗೆ ತಾನು ಹೇಳಿಕೊಂಡ – 'ನನ್ನ ನೆನಪು ಮಾಡಿಕೋ, ನನ್ನ ನೆನಪು ಮಾಡಿಕೋ.' ಶ್ರೀಮಾತೆಯವರ ಅನುಕಂಪದಿಂದ ಕೂಡಿದ ಎರಡು ಸುಂದರ ಕಣ್ಣುಗಳನ್ನು ಅವನಿಗೆ ಮರೆಯಲಾಗಲಿಲ್ಲ. ಅವರ ಕಣ್ಣು ಹಾಗೂ 'ನನ್ನ ನೆನಪು ಮಾಡಿಕೋ' ಎಂಬ ಮಾತುಗಳನ್ನೇ ಅವನು ನಿರಂತರ ಚಿಂತಿಸುತ್ತಲೇ ಇದ್ದ.

ಮುಂದೆ ಅವನು ಸಂನ್ಯಾಸಿಯಾದ, ಅತ್ಯಂತ ಉತ್ತಮವಾದ ಜೀವನವನ್ನು ನಡೆಸಿದ. ಮುಂದೆ ಅವನು ತನ್ನ ಈ ಅನುಭವವನ್ನು ಇನ್ನೊಬ್ಬ ಸಹೋದರ ಸಂನ್ಯಾಸಿಗೆ ತಿಳಿಸಿದ. ಆ ಇನ್ನೊಬ್ಬರು ರಾಮಕೃಷ್ಣ ಮಹಾಸಂಘದ ಹಿರಿಯ ಸಂನ್ಯಾಸಿಗಳು.

*('Teachings of Sri Sarada Devi, The Holy Mother' ಪುಸ್ತಕದಿಂದ)*